# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 584 (646) |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12 /12/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನಿರ್ಮಿಸುತ್ತಿರುವ ಶ್ರಮಿಕ ವಸತಿ ಸಹಿತ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಮಂಡಳಿಯ ವತಿಯಿಂದ ಒಟ್ಟು 42 ಶ್ರಮಿಕ ವಸತಿ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. ಜಿಲ್ಲಾವಾರು ವಿವರ **ಅನುಬಂಧದಲ್ಲಿ** ಲಗತ್ತಿಸಿದೆ. |
| ಆ) | ಶಾಲೆಗಳ ನಿರ್ಮಾಣಕ್ಕಾಗಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು; ಹಾಗೂ ಇದರ ಉದ್ದೇಶವೇನು; | ಮೊದಲನೇ ಹಂತದಲ್ಲಿ 31 ಶ್ರಮಿಕ ವಸತಿ ಶಾಲೆಗಳ ನಿರ್ಮಾಣಕ್ಕಾಗಿ ಮಂಡಳಿಯಿಂದ ಒಟ್ಟು ರೂ.1125.25 ಕೋಟಿ ವೆಚ್ಚ ಭರಿಸಲಾಗುವುದು. ಎರಡನೇ ಹಂತದಲ್ಲಿ 11 ಶ್ರಮಿಕ ವಸತಿ ಶಾಲೆಗಳ ನಿರ್ಮಾಣಕ್ಕಾಗಿ ಮಂಡಳಿಯಿಂದ ಒಟ್ಟು ರೂ.405.55 ಕೋಟಿ ವೆಚ್ಚ ಭರಿಸಲಾಗುವುದು.<br>ಈ ವೆಚ್ಚವನ್ನು ಸಂಪೂರ್ಣವಾಗಿ ಮಂಡಳಿಯ ಸುಂಕ ನಿಧಿಯಿಂದ ಭರಿಸಲಾಗುವುದು. ಸರ್ಕಾರದಿಂದ ಈ ಉದ್ದೇಶಕ್ಕಾಗಿ ಯಾವುದೇ ಅನುದಾನ ಮಂಡಳಿಗೆ ಬಿಡುಗಡೆಯಾಗಿರುವುದಿಲ್ಲ.<br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ವಿದ್ಯಾಭ್ಯಾಸವು ಮುಖ್ಯ ಪಾತ್ರ ವಹಿಸಲಿದ್ದು, ಕಟ್ಟಡ ಕಾರ್ಮಿಕರು ಕೆಲಸಕ್ಕಾಗಿ ಬೇರೆ ನಗರಗಳು ಅಥವಾ ರಾಜ್ಯಗಳಿಗೆ ವಲಸೆ ಹೋಗಿ ಕಾರ್ಯನಿರ್ವಹಿಸಿ ಜೀವನ ಸಾಗಿಸುತ್ತಿರುವಂತಹ ಮಕ್ಕಳಿಗೆ ಮನೆಯಲ್ಲಿ ಪೋಷಿಸಿ ಉತ್ತಮ ವಿದ್ಯಾಭ್ಯಾಸವನ್ನು ನೀಡಲು ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ವಸತಿ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. |

| | | |
|---|---|---|
| ಇ) | ಶಾಲೆಗಳ ನಿರ್ಮಾಣ ಮಾಡಲು ಸರ್ಕಾರ ರೂಪಿಸಿರುವ ಪ್ರಕ್ರಿಯೆ ಹಾಗೂ ಮಾನದಂಡಗಳೇನು; | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು ವಸತಿ ಶಾಲೆಗಳನ್ನು ನಿರ್ಮಾಣ ಮಾಡಲು ಸಚಿವ ಸಂಪುಟದ ಮತ್ತು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ವಯ ದಿನಾಂಕ:26-09-2025 ರಂದು ಟೆಂಡರ್ ಕರೆಯಲಾಗಿದ್ದು, ಪ್ರಸ್ತುತ ವಿವಿಧ ಬಿಡ್‌ದಾರರ ಬಿಡ್‌ಗಳ ಮೌಲ್ಯಮಾಪನ ಕಾರ್ಯವನ್ನು ನಡೆಸಲಾಗುತ್ತಿದೆ. ಕೆಟಿಪಿಪಿ ಕಾಯ್ದೆ ಮತ್ತು ನಿಯಮಗಳನ್ವಯ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಮುಕ್ತ ಟೆಂಡರ್ ಕರೆಯಲಾಗಿದ್ದು, ಅರ್ಹತಾ ಮಾನದಂಡಗಳನ್ನು ಪೂರೈಸುವ ಯಾವುದೇ ಬಿಡ್‌ದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶವನ್ನು ನೀಡಲಾಗಿರುತ್ತದೆ. ಈ ಕಾಮಗಾರಿಯ ಸಮರ್ಪಕ ನಿರ್ವಹಣೆ ಅನುಷ್ಠಾನ ಹಾಗೂ ಮೇಲುಸ್ತುವಾರಿಗೆ ಅನುಕೂಲವಾಗುವಂತೆ ರಾಜ್ಯದ ಕಂದಾಯ ವಿಭಾಗವಾರು ಟೆಂಡರ್ ಅನ್ನು ಕರೆಯಲಾಗಿರುತ್ತದೆ.<br><br>ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ದಿನಾಂಕ:01-12-2023ರಂದು ಹೊರಡಿಸಿರುವ ಸುತ್ತೋಲೆಯನ್ವಯ ಮಂಡಳಿಯ ವತಿಯಿಂದ ವಸತಿ ಶಾಲೆಯನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಆದುದರಿಂದ, ಈ ಯೋಜನೆಯ ಪ್ರಸ್ತಾವನೆಯ ಹಂತದಲ್ಲಿ ವಸತಿ ಶಾಲೆಗಳನ್ನು ನಿರ್ಮಿಸಿ ನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ಅಧೀನದ ಸರ್ಕಾರದ ಸಂಸ್ಥೆಯಾದ KREIS ನಿಂದ ಅಗತ್ಯ ಮಾಹಿತಿಯನ್ನು ಪಡೆಯಲಾಗಿರುತ್ತದೆ. ಮುಂದುವರೆದು, ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು CBSC ಸಂಸ್ಥೆಯ ಮಾನದಂಡಗಳನ್ನು ಅಳವಡಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ |
| ಈ) | ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರಗಳನ್ನು ಒದಗಿಸುವುದು ಹಾಗೂ ಟೆಂಡರ್‌ಗೂ ಮೊದಲೇ ಗುತ್ತಿಗೆದಾರರನ್ನು ಗುರ್ತಿಸಿರುವುದು (ಫಿಕ್ಸ್) ನಿಜವೇ; ಇದರ ಉದ್ದೇಶವೇನು; ಯಾವ | ಕ್ಲಸ್ಟರ್ ವಾರು ಟೆಂಡರ್ ಗಳನ್ನು K.T.P.P Act ದನ್ವಯ ಕರೆಯಲಾಗಿದ್ದು ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಟೆಂಡರ್ ಪೂರ್ಣಗೊಳಿಸುವ ಪೂರ್ವದಲ್ಲಿ ಗುತ್ತಿಗೆದಾರರನ್ನು ಗುರುತಿಸುವುದಕ್ಕೆ K.T.P.P Act ನಲ್ಲಿ ಅವಕಾಶವಿರುವುದಿಲ್ಲ. ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡ ನಂತರ |

| | | |
|---|---|---|
| | ಗುತ್ತಿಗೆದಾರರಿಗೆ ಪ್ಯಾಕೇಜ್ ಗುತ್ತಿಗೆ ನೀಡಲಾಗಿದೆ; | ಗುತ್ತಿಗೆದಾರರನ್ನು ಗುರುತಿಸಲಾಗುತ್ತದೆ. ಪ್ರಸ್ತುತ ಯಾವುದೇ ಗುತ್ತಿಗೆದಾರರನ್ನು ಅಂತಿಮಗೊಳಿಸಿಲ್ಲ. ಆದ್ದರಿಂದ, ಗುತ್ತಿಗೆದಾರರಿಗೆ ಯಾವುದೇ ಪ್ಯಾಕೇಜನ್ನು ನೀಡಿಲ್ಲ. |
| ಉ) | ರಾಜ್ಯದಲ್ಲಿರುವ ಸರ್ಕಾರಿ ಶಾಲೆ ಮುಚ್ಚುತ್ತಿರುವಾಗ ಅಂತಹ ಶಾಲೆಯೊಂದನ್ನು ಗುರುತಿಸಿ ಕಾರ್ಮಿಕ ಮಂಡಳಿ ವಸತಿ ಶಾಲೆ ಆರಂಭಿಸುವ ಬಗ್ಗೆ ಸರ್ಕಾರ ಗಮನಹರಿಸಿದೆಯೇ? | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಮತ್ತು ಕರ್ನಾಟಕ ನಿಯಮಗಳು 2006 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರ ಕಲ್ಯಾಣ ಮತ್ತು ಸಾಮಾಜಿಕ ಸುರಕ್ಷತೆಗಾಗಿ ಇರುವ ಶಾಸನವಾಗಿದ್ದು, ಈ ಕಾಯ್ದೆಯಡಿ ಸಂಗ್ರಹವಾದ ಸುಂಕ ಮೊತ್ತವನ್ನು ಸರ್ಕಾರದ ಯಾವುದೇ ಯೋಜನೆಗಳಿಗೆ ವಿನಿಯೋಗಿಸಲು ಅವಕಾಶವಿರುವುದಿಲ್ಲ.<br><br>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಎಲ್ಲಾ ಸೌಕರ್ಯಗಳನ್ನು ಒಳಗೊಂಡಂತಹ ವಸತಿ ಶಾಲೆಗಳನ್ನು ನಿರ್ಮಿಸಲಾಗುತ್ತಿದ್ದು, ಸರ್ಕಾರಿ ಶಾಲೆಗಳನ್ನು ನಿರ್ವಹಿಸಲು ಮಂಡಳಿಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಕಾಇ 483 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ

## 42 ಶ್ರಮಿಕ ವಸತಿ ಶಾಲೆಗಳ ಪಟ್ಟಿ

| ಕ್ರ.ಸಂ. | ಜಿಲ್ಲೆ | ವಿಧಾನಸಭಾ ಕ್ಷೇತ್ರ/ತಾಲ್ಲೂಕು/ಗ್ರಾಮ |
|---|---|---|
| 1. | ಬೆಂಗಳೂರು ಗ್ರಾಮಾಂತರ | ಹೊಸಕೋಟೆ/ಹೊಸಕೋಟೆ/ ಬೇಗೂರು |
| 2. | ಕೋಲಾರ | ಬಂಗಾರಪೇಟೆ/ಬಂಗಾರಪೇಟೆ/ ಯೆಲೆಸಂದ್ರ |
| 3. | ಚಿತ್ರದುರ್ಗ | ಹಿರಿಯೂರು/ಹಿರಿಯೂರು/ ಹುಲುಗಲಗುಂಟೆ |
| 4. | ತುಮಕೂರು | ಪಾವಗಡ/ಪಾವಗಡ/ಸಿದ್ದಾಪುರ |
| 5. | ಚಿಕ್ಕಬಳ್ಳಾಪುರ | ಬಾಗೇಪಲ್ಲಿ/ಬಾಗೇಪಲ್ಲಿ/ ನಾರಾಯಣಸ್ವಾಮಿ ಕೋಟೆ |
| 6. | ಶಿವಮೊಗ್ಗ | ಶಿವಮೊಗ್ಗ ಗ್ರಾಮಾಂತರ/ ಶಿವಮೊಗ್ಗ/ಸಿದ್ಲೀಪುರ |
| 7. | ದಾವಣಗೆರೆ | ದಾವಣಗೆರೆ ಉತ್ತರ/ ದಾವಣಗೆರೆ/ತುರುಚಿಘಟ್ಟ |
| 8. | ಬೆಂಗಳೂರು ದಕ್ಷಿಣ | ಕನಕಪುರ/ಕನಕಪುರ |
| 9. | ಬೆಂಗಳೂರು ನಗರ | ಆನೇಕಲ್/ಆನೇಕಲ್ |
| 10. | ಮೈಸೂರು | ವರುಣ/ಮೈಸೂರು/ ಚೋರನಹಳ್ಳಿ |
| 11. | ಚಾಮರಾಜನಗರ | ಚಾಮರಾಜನಗರ/ಚಾಮರಾಜನಗರ/ಯಡಿಯೂರು |
| 12. | ಚಿಕ್ಕಮಗಳೂರು | ಕಡೂರು/ಕಡೂರು/ ಯಲಗೊಂಡನಹಳ್ಳಿ |
| 13. | ಮಂಡ್ಯ | ನಾಗಮಂಗಲ/ನಾಗಮಂಗಲ/ ಬೀರೇಶ್ವರಪುರ |
| 14. | ಹಾಸನ | ಅರಸೀಕೆರೆ/ಅರಸೀಕೆರೆ/ ಹಬ್ಬನಘಟ್ಟ |
| 15. | ಉಡುಪಿ | ಕಾಪು/ಉಡುಪಿ/ಅಂಜಾರು |
| 16. | ದಕ್ಷಿಣ ಕನ್ನಡ | ಪುತ್ತೂರು/ಪುತ್ತೂರು/ಕುರಿಯಾ |
| 17. | ಕೊಡಗು | ಸೋಮವಾರಪೇಟೆ/ಸೋಮವಾರಪೇಟೆ/ಚನ್ನಾಪುರ |
| 18. | ಕಲಬುರ್ಗಿ | ಕಲಬುರ್ಗಿ ಗ್ರಾಮಾಂತರ /ಕಲಬುರ್ಗಿ/ಕಪನೂರು |
| 19. | ಬೀದರ್ | ಬಾಲ್ಕಿ/ಬಾಲ್ಕಿ/ಮಳಚಾಪುರ |
| 20. | ಯಾದಗಿರಿ | ಶಾಹಪುರ/ಶಾಹಪುರ/ ಕಂಚನಕವಿ |
| 21. | ಕೊಪ್ಪಳ | ಯಲಬುರ್ಗಾ/ಯಲಬುರ್ಗಾ |
| 22. | ಬಳ್ಳಾರಿ | ಕುರುಗೋಡು/ಕುರುಗೋಡು/ ಕುರುಗೋಡು |
| 23. | ವಿಜಯನಗರ | ಕೂಡಲಗಿ/ಕೂಡಲಗಿ/ಶಿವಪುರ |
| 24. | ರಾಯಚೂರು | ರಾಯಚೂರು/ರಾಯಚೂರು |
| 25. | ಧಾರವಾಡ | ಕಲಘಟಗಿ/ಕಲಘಟಗಿ/ ಹನಮಾಪುರ |
| 26. | ಬೆಳಗಾವಿ | ಕಿತ್ತೂರು/ಕಿತ್ತೂರು/ಕಿತ್ತೂರು |
| 27. | ಬಾಗಲಕೋಟೆ | ಬೀಳಗಿ/ಬೀಳಗಿ/ಸುನಗ |
| 28. | ವಿಜಯಪುರ | ಇಂಡಿ/ಇಂಡಿ/ಹಳಗುಣಕಿ |
| 29. | ಹಾವೇರಿ | ಬ್ಯಾಡಗಿ/ಬ್ಯಾಡಗಿ/ಹಿರೇಅಣಜಿ |
| 30. | ಗದಗ | ರೋಣ/ರೋಣ |
| 31. | ಉತ್ತರ ಕನ್ನಡ | ಭಟ್ಕಳ/ಭಟ್ಕಳ/ಹೆಬಳೆ ಗ್ರಾಮ |
| 32. | ಕೋಲಾರ | ಮಾಲೂರು/ಮಾಲೂರು/ಕೆ.ಜಿ.ಹಳ್ಳಿ |
| 33. | ಚಿತ್ರದುರ್ಗ | ಹೊಸದುರ್ಗ/ಹೊಸದುರ್ಗ/ಮಸನಿಹಳ್ಳಿ |
| 34. | ತುಮಕೂರು | ಕೊರಟಗೆರೆ/ಕೊರಟಗೆರೆ/ಬಿ.ಎಸ್.ಜಿ.ಪಾಳ್ಯ |
| 35. | ದಾವಣಗೆರೆ | ಮಾಯಕೊಂಡ/ದಾವಣಗೆರೆ/ಹೊಸಹಳ್ಳಿ |
| 36. | ಕೊಪ್ಪಳ | ಕಾರಟಗಿ/ಕಾರಟಗಿ/ಎರಡೋಣ |
| 37. | ಬಳ್ಳಾರಿ | ಸಿರಗುಪ್ಪ/ಸಿರಗುಪ್ಪ |
| 38. | ಬೆಳಗಾವಿ | ಅಥಣಿ/ಅಥಣಿ/ಅಥಣಿ |
| 39. | | ರಾಮದುರ್ಗ/ರಾಮದುರ್ಗ/ಒಬಳಾಪುರ |
| 40. | | ಯಮಕನಮರಡಿ/ಹುಕ್ಕೇರಿ/ಕರಗುಪ್ಪಿ |
| 41. | | ಬೈಲಹೊಂಗಲ/ಬೈಲಹೊಂಗಲ/ದೊಡ್ಡವಾಡ |
| 42. | ಉತ್ತರ ಕನ್ನಡ | ಹಳಿಯಾಳ/ದಾಂಡೇಲಿ/ದಾಂಡೇಲಿ |